ಈ ಸೇತುವೆಯ ನಿರ್ಮಾಣದ ಕುರಿತು ಅಧಿಕಾರಿಗಳ ಜೊತೆಗೆ ಚರ್ಚೆ ಮಾಡಿ ಅದನ್ನು ಆದಷ್ಟು ಜಾಗ್ರತೆ ಮುಗಿಸುವ ಬಗ್ಗೆ ಕ್ರಮ ಜರುಗಿಸುತ್ತೇನೆ ಎಂದು ತಮ್ಮ ಮೂಲಕ ಮಾನ್ಯ ಸದಸ್ಯರಿಗೆ ತಿಳಿಸಲಿಚ್ಛಿಸುತ್ತೇನೆ.

ಶ್ರೀ ಶಿವಾನಂದ ನಾಯಕ್:— ಕಳೆದ ಎರಡು ವರ್ಷಗಳಿಂದ ರೈತರು ಅಲ್ಲಿ ಬಂಡ್‌ನ್ನು ಹಾಕುತ್ತಾ ಇಲ್ಲ. ಗುತ್ತಿಗೆದಾರರನ್ನು ಬದಲಾಯಿಸಿ ಬೇರೆಯವರಿಗೆ ಕೊಟ್ಟಾದರೂ ಕೆಲಸವನ್ನು ಬೇಗನೆ ಮುಗಿಸಬೇಕು.

ಶ್ರೀ ಉಮೇಶ್ ವಿ. ಕತ್ತಿ:— ಅದನ್ನು ನಾನು ಪರಿಶೀಲಿಸುತ್ತೇನೆ.

ಮೀನುಗಾರರಿಗೆ ವಸತಿ ಸೌಲಭ್ಯ.

348(2272) ಶ್ರೀ ಕುಂಭ್ಳೆ ಸುಂದರರಾವ್, (ಸುರತ್ಕಲ್) :—ಮಾನ್ಯ ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೀನುಗಾರರಿಗೆ ವಸತಿ ಸೌಕರ್ಯ ಒದಗಿಸುವ ಯೋಜನೆ ಜಾರಿಗೆ ಬಂದದ್ದು ಯಾವಾಗ ;

ಆ) ಈ ಯೋಜನೆಯಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇದುವರೆವಿಗೆ ಗೊತ್ತುಪಡಿಸಿದ ಮನೆಗಳ ಒಟ್ಟು ಸಂಖ್ಯೆ ಎಷ್ಟು, (ವಿಧಾನಸಭಾ ಕ್ಷೇತ್ರವಾರು ವಿವರ ಒದಗಿಸುವುದು)

ಇ) ಸೂರತ್ಕಲ್ ವಿಧಾನಸಭಾ ಕ್ಷೇತ್ರಕ್ಕೆ ಗೊತ್ತುಪಡಿಸಿರುವ ಮನೆಗಳ ಸಂಖ್ಯೆ ಕಡಿಮೆಯಾಗಿದೆಯೆಂಬುದು ನಿಜವೇ; ಹಾಗಿದ್ದಲ್ಲಿ ಅದಕ್ಕೆ ಕಾರಣವೇನು;

ಈ) ಸುರತ್ಕಲ್ ಕ್ಷೇತ್ರದಲ್ಲಿ ಯಾವ್ಯಾವ ರಸ್ತೆಗಳ ನಿರ್ಮಾಣಕ್ಕಾಗಿ ಮೀನುಗಾರಿಕಾ ಇಲಾಖೆಯಿಂದ ಕೋರಿಕೆ ಬಂದಿದೆ.

ಉ) ಈ ಬಗ್ಗೆ ಮಂಜೂರಾದ ರಸ್ತೆಗಳು ಯಾವುವು?

ಶ್ರೀ ಕೆ. ಜಯಪ್ರಕಾಶ ಹೆಗ್ಡೆ (ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು) :—

ಅ) ಈ ಯೋಜನೆಯು 1987-88ರಿಂದ ಜಾರಿಯಲ್ಲಿದೆ.

ಆ) "ಕೇಂದ್ರ ಪುರಸ್ಕೃತ" ರಾಷ್ಟ್ರೀಯ ಮೀನುಗಾರರ ಕಲ್ಯಾಣ ನಿಧಿ ಯೋಜನೆ ಹಾಗೂ ಹುಡ್ಕೋ ನೆರವಿನ ಮತ್ಸ್ಯ ಆಶ್ರಯ ಯೋಜನೆಗಳಲ್ಲಿ ದಕ್ಷಿಣ ಕನ್ನಡ ಜಿಲ್ಲೆಗೆ ಈವರೆಗೆ ಒಟ್ಟು 131 ಮನೆಗಳನ್ನು ಮಂಜೂರು ಮಾಡಲಾಗಿದೆ. ಕ್ಷೇತ್ರವಾರು ವಿವರ ಈ ಕೆಳಗಿನಂತಿದೆ.

ವರ್ಷ	ಮುಲ್ಕಿ ಮೂಡಬಿದ್ರೆ	ಉಳ್ಳಾಲ,	ಸೂರತ್ಕಲ್	ಮಂಗಳೂರು
1992-93	14	--	--	--
1995-96	--	12	--	--
1996-97	--	--	--	--
1997-98	07	19	04	--
1998-99	19	28	02	01
1999-2000	--	--	--	25
ಒಟ್ಟು	40	59	06	26

ಇ) ಇಲ್ಲ. ಸೂರತ್ಕಲ್ ಕ್ಷೇತ್ರದಿಂದ ಮನೆ ಬೇಡಿಕೆಗಾಗಿ ಬಂದ ಎಲ್ಲ ಅರ್ಜಿದಾರರಿಗೂ ಮನೆ ಮಂಜೂರು ಮಾಡಲಾಗಿದೆ.

ಈ) ಸೂರತ್ಕಲ್ ಕ್ಷೇತ್ರದಲ್ಲಿ ಈ ಕೆಳಗೆ ವಿವರಿಸಿರುವ ರಸ್ತೆಗಳ ನಿರ್ಮಾಣ ಅಭಿವೃದ್ಧಿ ಹಾಗೂ ದುರಸ್ಥಿಗೆ ಬೇಡಿಕೆಗಳು ಬಂದಿರುತ್ತದೆ

1) ಹೊಸಬೆಟ್ಟು ಗ್ರಾಮದ ಕಾಳಪ್ಪಯ್ಯ ರಸ್ತೆ ನಿರ್ಮಾಣ,
2) ಕೊಳ್ಳೂರು ತಣ್ಣೀರು ಭಾವಿ-ಬೆಂಗ್ರೆ ರಸ್ತೆ ನಿರ್ಮಾಣ ಹಾಗೂ ಅಭಿವೃದ್ಧಿ,
3) ಬೈಕಂಪಾಡಿ ಮೀನುಗಾರಿಕೆ ರಸ್ತೆಯ ಕೊನೆಯ ಮೀನುಕಳಿಯ ರಸ್ತೆ ನಿರ್ಮಾಣ,
4) ಕೂಳೂರು ತಣ್ಣೀರು ಭಾವಿ ರಸ್ತೆ ದುರಸ್ಥಿ
5) ಗುಡ್ಡೆ ಕೊಪ್ಪದಿಂದ ಮುಂದಕ್ಕೆ ರಸ್ತೆ ಅಭಿವೃದ್ಧಿ
6) ಕೊಳ್ಕಾ ಮೀನುಗಾರಿಕೆ ರಸ್ತೆ ದುರಸ್ಥಿ
7) ಮಿತ್ರ ಪಟ್ಟಣ ಮೀನುಗಾರಿಕೆ ರಸ್ತೆ ದುರಸ್ಥಿ
8) ಕುಳ್ಕಾ ಮೀನುಗಾರಿಕೆ ರಸ್ತೆಯ ಅಯ್ದು ಭಾಗದ ದುರಸ್ಥಿ (ಚಿತ್ರಾಪುರ ಮೂಲಕ ಕೆ.ಎಫ್.ಡಿ.ಸಿ.) ಐಸ್ ಫ್ಯಾಕ್ಟರಿವರೆಗೆ)
9) ಹೊಸಬೆಟ್ಟು ಮೀನುಗಾರಿಕೆ ರಸ್ತೆಯ ಅಭಿವೃದ್ಧಿ,

ಉ) ಸುರತ್ಕಲ್ ಕ್ಷೇತ್ರದಲ್ಲಿ 1995-96 ರಿಂದ 1999-2000 ರವರೆಗೆ ಕೈಗೊಂಡಿರುವ ರಸ್ತೆಗಳ ನಿರ್ಮಾಣ ಅಭಿವೃದ್ಧಿ ವಿವರ ಕೆಳಕಂಡಂತೆ ಇದೆ.

1) ಹೊಸಬೆಟ್ಟು ಗ್ರಾಮದ ಕಾಳಪ್ಪಯ್ಯ ರಸ್ತೆ ನಿರ್ಮಾಣ
2) ಕೂಳೂರು- ತಣ್ಣೀರು ಭಾವಿ-ಬೆಂಗ್ರೆ ರಸ್ತೆ ನಿರ್ಮಾಣ ಹಾಗೂ ಅಭಿವೃದ್ಧಿ,

3) ಬೈಕಂಪಾಡಿ ಮೀನುಗಾರಿಕೆ ರಸ್ತೆಯ ಕೊನೆಯ ಮೀನಕಳಿಯ ರಸ್ತೆ ನಿರ್ಮಾಣ

4) ಕೂಳೂರು- ತಣ್ಣೀರು ಭಾವಿಯ ರಸ್ತೆ ದುರಸ್ಥಿ.

5) ಗುಡ್ಡೆ ಕೊಪ್ಪದಿಂದ ಮುಂದಕ್ಕೆ ರಸ್ತೆ ಅಭಿವೃದ್ಧಿ

6) ಕೊಳ್ಕಾ ಮೀನುಗಾರಿಕೆ ರಸ್ತೆ ದುರಸ್ಥಿ

7) ಮಿತ್ರಪಟ್ಟಣ ಮೀನುಗಾರಿಕೆ ರಸ್ತೆ ದುರಸ್ಥಿ,

8) ಕೊಳ್ಕಾ ಮೀನುಗಾರಿಕೆ ರಸ್ತೆಯ ಅಯ್ದ ಭಾಗದ ದುರಸ್ಥಿ
(ಚಿತ್ರಾಪುರ ಮೂಲಕ ಕೆ.ಎಫ್.ಡಿ.ಸಿ. ಐಸ್ ಫ್ಯಾಕ್ಟರಿಯ ಸಂಪರ್ಕ ರಸ್ತೆ)

9) ಹೊಸಬೆಟ್ಟು ಮೀನುಗಾರಿಕೆ ರಸ್ತೆಯ ಅಭಿವೃದ್ಧಿ.

ಶ್ರೀ ಕುಂಭೆ ಸುಂದರರಾವ್ :— ಸನ್ಮಾನ್ಯ ಅಧ್ಯಕ್ಷರೇ, ಈ ಮೀನುಗಾರಿಕೆ ಸಮಾಜಕ್ಕೆ, ಅಂದರೆ ಮೀನುಗಾರರಿಗೆ ವಸತಿ ಸೌಲಭ್ಯ ಒದಗಿಸುವ ಯೋಜನೆಯು ಯಾವಾಗ ಜಾರಿಗೆ ಬಂತು ಎಂದು ನಾನು ಕೇಳಿದರೆ, 1987-88 ರಿಂದ ಇದು ಜಾರಿಗೆ ಬಂದಿದೆ ಎಂದು ಮಾನ್ಯ ಸಚಿವರು ಉತ್ತರಿಸಿದ್ದಾರೆ. ಹಾಗಾದರೆ 1987-88ರಿಂದ 1998-99ರ ವರೆಗೆ ಎಷ್ಟು ಜನರಿಗೆ ಇಲಾಖೆಯವರು ವಸತಿ ಸೌಲಭ್ಯಗಳನ್ನು ಒದಗಿಸಿಕೊಡಬೇಕಾಗಿತ್ತು? ಸಾವಿರಾರು ಜನರಿಗೆ ವಸತಿ ಸೌಲಭ್ಯ ಒದಗಿ ಬರಬೇಕಾಗಿತ್ತು. ರಾಜ್ಯದ ಎಲ್ಲಾ ಕಡೆಗಳಿಗೂ ಇಂಥ ಮನೆಗಳನ್ನು ಹಂಚಿಕೆ ಮಾಡಿದ್ದಾರೆ. ಬೆರಳೆಣಿಕೆಯಷ್ಟು ಮನೆಗಳನ್ನು ನನ್ನ ಕ್ಷೇತ್ರಕ್ಕೂ ಕೊಟ್ಟಿದ್ದಾರೆ. ಕೇವಲ 6 ಮನೆಗಳನ್ನು ಮಾತ್ರ ಕೊಟ್ಟಿದ್ದಾರೆ. ಸುರತ್ಕಲ್ ಕ್ಷೇತ್ರದಲ್ಲಿ ಮೀನುಗಾರರ ಸಂಖ್ಯೆ ಕಡಿಮೆ ಎಂದು ಹೀಗೆ ಮಾಡಿದ್ದಾರೋ? ಯಾಕೆ ಇಷ್ಟು ಕಡಿಮೆ ಕೊಟ್ಟಿದ್ದೀರಿ ಎಂದು ಕೇಳಿದ್ದಕ್ಕೆ, ಬಂದ ಅರ್ಜಿಗಳನ್ನು ಪುರಸ್ಕರಿಸಿದ್ದೇವೆ ಎಂಬ ಉತ್ತರ ಬಂದಿದೆ. ಅರ್ಜಿಗಳು ಬರುವುದಾದರೂ ಹೇಗೆ? ಬಡ ಮೀನುಗಾರರಿಗೆ ನಿಮ್ಮ ಯೋಜನೆಗಳ ಬಗ್ಗೆ ತಿಳಿಸಿದ್ದೀರಾ? ನಿಮ್ಮ ಅಧಿಕಾರಿಗಳು ಸ್ಥಳೀಯ ಶಾಸಕರನ್ನು ಈ ಬಗ್ಗೆ ಸಂಪರ್ಕ ಮಾಡಿದ್ದಾರೆಯೇ? ಎಂಆರ್‌ಪಿಎಲ್ ಸಮಸ್ಯೆ ಬಂದಾಗ ನಮ್ಮ ಕ್ಷೇತ್ರದ ಎಲ್ಲಾ ಜನರು ಅಂದರೆ ಎಲ್ಲಾ ಮೀನುಗಾರರು ಚಳುವಳಿಯಲ್ಲಿ ಭಾಗವಹಿಸಿದ್ದರು. ಅವರಿಗೆ ಮೀನುಗಾರಿಕೆ ಬಿಟ್ಟರೆ ಬೇರೆ ಉದ್ಯೋಗ ಗೊತ್ತಿಲ್ಲ. ಅಷ್ಟು ದೊಡ್ಡ ಚಳುವಳಿ ಮಾಡಿದ ಸಾವಿರಾರು ಸಂಖ್ಯೆಯಲ್ಲಿದ್ದ ಮೀನುಗಾರರಿಗೆ, ಇಡೀ ಸುರತ್ಕಲ್ ಕ್ಷೇತ್ರಕ್ಕೆ 6 ಮನೆಗಳನ್ನು ಮಾತ್ರ ಕೊಟ್ಟಿದ್ದೀರಿ. ಅವರಿಂದ ಬೇಡಿಕೆ ಬಾರದಿದ್ದುದು ಒಂದು ಕಾರಣವೇ? ಆ ಬಡ ಮೀನುಗಾರರಿಗೆ ನೀವು ಮನೆ ಕೊಡುತ್ತೀರಿ ಎಂಬ ಬಗ್ಗೆ ಸ್ಪಷ್ಟ ಬೀಳುತ್ತದೆಯೇ? ಆ ಕುರಿತು ಶಾಸಕರಿಗೆ ಸ್ಪಷ್ಟ ಬೀಳುತ್ತದೆಯೇ? ನಿಮ್ಮ ಅಧಿಕಾರಿಗಳು ನಮ್ಮನ್ನು ಸಂಪರ್ಕ ಮಾಡೇಕೆ? ಬೇಡವೆ? ಯಾಕೆ ಮಾಡಿಲ್ಲ? ಒಟ್ಟಿನಲ್ಲಿ ಮನೆಗಳ ಹಂಚಿಕೆ ವಿಚಾರದಲ್ಲಿ ನಮಗೆ ಅನ್ಯಾಯವಾಗಿದೆ ಎಂದು ನಾನು ಹೇಳುತ್ತಾ ಇದನ್ನು ಸರಿಪಡಿಸಲು ಮಾನ್ಯ ಸಚಿವರು ಯಾವ ಕ್ರಮವನ್ನು ತೆಗೆದುಕೊಳ್ಳುತ್ತಾರೆ ಎಂಬ ಬಗ್ಗೆ ಹೇಳಬೇಕು.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ (ಸನ್ಮಾನ್ಯ ಮೀನುಗಾರಿಕೆ ಮತ್ತು ಬಂದರು ಸಚಿವರು) :— ಮಾನ್ಯ ಅಧ್ಯಕ್ಷರೇ, ಈ ಕರಾವಳಿ ಪ್ರದೇಶದಲ್ಲಿ ಸಮುದ್ರ ಕೊರೆತ ಇರುವುದರಿಂದ ಕಟ್ಟಡಗಳನ್ನು ಕಟ್ಟಲು ಸಾಧ್ಯವಾಗುತ್ತಾ ಇಲ್ಲ. ಅದರ ಸಲುವಾಗಿ ಒಂದು ತಿದ್ದುಪಡಿಯನ್ನು ತರಬೇಕೆಂದು ಕೇಂದ್ರ ಸರ್ಕಾರದವರೊಂದಿಗೆ ಇದನ್ನು ಮೂವ್ ಮಾಡಿದ್ದೇವೆ. ಅದು ರಾಜ್ಯ ಸಭೆಯಲ್ಲಿ ಪಾಸ್ ಆಗಿದ್ದು ಲೋಕಸಭೆಯಲ್ಲಿ ಪಾಸ್ ಆಗಿಲ್ಲ. ಈಗ ಯಾವ ಸ್ಥಿತಿಯಲ್ಲಿದೆ ಎಂದು ನನಗೆ ಗೊತ್ತಿಲ್ಲ. ಅದು ಪಾಸ್ ಆಗದ ಹೊರತು ನಾವು ಮೀನುಗಾರರಿಗೆ ಮನೆಗಳನ್ನು ಕೊಡುವುದಕ್ಕೆ ಆಗುವುದಿಲ್ಲ. ಅವರುಗಳು ಅಲ್ಲಿ ಮನೆಗಳನ್ನು ಕಟ್ಟಿಕೊಳ್ಳಲು ಬರುವುದಿಲ್ಲ. ಅದು ತಿದ್ದುಪಡಿಯಾಗಿ ಬಂದ ನಂತರ ನಮಗೆ ಹೆಚ್ಚು ಮನೆಗಳನ್ನು ಕೊಡು ಸಾಧ್ಯವಾಗುತ್ತದೆ, ಆ ಸಂದರ್ಭದಲ್ಲಿ ತಮ್ಮ ಕ್ಷೇತ್ರದ ಬೇಡಿಕೆಗಳನ್ನು ಪೂರೈಸಲು ಸಾಧ್ಯವಾಗುತ್ತದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇದೇ ಕಾರಣಕ್ಕಾಗಿ ಮೀನುಗಾರರ ಮನೆಗಳು ಕಡಿಮೆಯಾಗಿದೆ. ಅಂಥ ಸಮಸ್ಯೆಯಲ್ಲದ ಜಾಗವಿದ್ದರೆ ತಮ್ಮ ಕ್ಷೇತ್ರದ ವಿವರಗಳನ್ನು ಕೊಡಿ, ತಮಗೆ ಅಂಥ ಮನೆಗಳನ್ನು ಮಂಜೂರು ಮಾಡಲು ಪ್ರಯತ್ನ ಮಾಡುತ್ತೇನೆ.

ಶ್ರೀ ಕುಂಭೆ ಸುಂದರರಾವ್ :— ಮಾನ್ಯ ಸಚಿವರು ಹೇಳುವುದರಲ್ಲಿ ನ್ಯಾಯವಿದೆ. ಸಮುದ್ರತೀರದಿಂದ 500 ಮೀಟರ್‌ಗಳವರೆಗೆ ಮೀನುಗಾರರಿಗೆ ಮನೆಗಳನ್ನು ಕೊಡಲು ಬಾರದು ಎಂಬ ಕೇಂದ್ರದ ನೀತಿಯಿದೆ. ಇದು ಬೇರೆ ನೀತಿಯಾಗಿದ್ದು, ನಾನು ಸುರತ್ಕಲ್ ಕ್ಷೇತ್ರದ ಈ ಬಡ ಮೀನುಗಾರರಿಗೆ ಮನೆಗಳನ್ನು ಕೊಡುವುದರಲ್ಲಿ ತೋರಿದ ನಿರಾಸಕ್ತಿಯ ಬಗ್ಗೆ ಕೇಳಿದ್ದೇನೆ. ಅರ್ಜಿಗಳು ಯಾಕೆ ಬಂದಿಲ್ಲ ಎಂಬುದನ್ನು ತಾವುಗಳು ನೋಡಬೇಕು.

ಅಧ್ಯಕ್ಷರು :— ಸ್ಥಳೀಯ ಶಾಸಕರು ಅವರುಗಳ ಜೊತೆಗೆ ಓಡಾಡಿ, ಅರ್ಜಿಗಳನ್ನು ಸಂಗ್ರಹಿಸಿ ಅವುಗಳನ್ನು ಮಂತ್ರಿಗಳಿಗೆ ಕೊಟ್ಟು, ನಮ್ಮ ಕ್ಷೇತ್ರದಲ್ಲಿ ಇಷ್ಟು ಜನರಿದ್ದಾರೆ ಎಂದು ಹೇಳಿ, ಅವರು ಕೊಡದೇ ಹೋದರೆ ಇಲ್ಲಿ ಬಂದು ಪ್ರಸ್ತಾಪ ಮಾಡಬೇಕು. ಸ್ಥಳೀಯ ಶಾಸಕರು ಮುತುವರ್ಜಿ ವಹಿಸಿ ಪಟ್ಟಿ ಕೊಟ್ಟರೆ ಅವರು ಖಂಡಿತವಾಗಿ ಸಹಾಯ ಮಾಡುತ್ತಾರೆ. ಆಗ ನಿಮ್ಮ ಜನರಿಗೆ ಅನುಕೂಲವಾಗುತ್ತದೆ.

ಶ್ರೀ ರಾಜೇಂದ್ರನ್ (ಕೆಜಿಎಫ್) :— ಶಾಸಕರುಗಳಿಗೆ ಆ ಅಧಿಕಾರಿಗಳು ಮಾಹಿತಿಗಳನ್ನು ಕೊಡುವುದು ಬೇಡವೆ? ಅಧಿಕಾರಿಗಳು ಇರುವುದು ಸುಮ್ಮನೆ ಕುಳಿತುಕೊಂಡು ಸಂಬಳ ಸಾರಿಗೆ ತೆಗೆದುಕೊಳ್ಳಲು ಮಾತ್ರವೆ? ಸಂಬಂಧಪಟ್ಟ ಅಧಿಕಾರಿಗಳು ಕ್ಷೇತ್ರದಲ್ಲಿ ಸಂಚಾರ ಮಾಡಿ ಫಲಾನುಭವಿಗಳನ್ನು ಗುರುತಿಸಬೇಕು. ಹೆಚ್ಚು ಜನರಿದ್ದರೆ ಪಟ್ಟಿ ಮಾಡುವಾಗ ಜನಪ್ರತಿನಿಧಿಗಳ ಸಲಹೆ ಸೂಚನೆಗಳನ್ನು ತೆಗೆದುಕೊಳ್ಳಬೇಕು. ಅಧಿಕಾರಿಗಳು ತಮ್ಮ ಕೆಲಸವನ್ನು ಸರಿಯಾಗಿ ಮಾಡುತ್ತಿಲ್ಲ. ಇದರಿಂದ ನೀವು ಓಟರ್ಸ್‌ಗೆ ಫನಿಷ್‌ಮೆಂಟ್ ಮಾಡಿದ ಹಾಗೆ ಆಗುತ್ತದೆಯೇ ವಿನಹ ನಿಜವಾದ ತಪ್ಪಿತಸ್ಥ ಅಧಿಕಾರಿಗಳಿಗೆ ಫನಿಷ್ ಮಾಡಿದ ಹಾಗೆ ಆಗಿಲ್ಲ.

ಅಧ್ಯಕ್ಷರು :— ಮಾನ್ಯ ಸದಸ್ಯರು ಒಳ್ಳೆಯ ಅಬ್ಸರ್‌ವೇಶನ್ ಮಾಡಿದ್ದಾರೆ.

ಶ್ರೀ ಕುಂಭೆ ಸುಂದರರಾವ್ :— ಮಾನ್ಯ ಅಧ್ಯಕ್ಷರೆ, ನನ್ನ ಕ್ಷೇತ್ರದ ಮೀನುಗಾರಿಕಾ ರಸ್ತೆಯ ಬಗ್ಗೆ ಕೇಳಿದ ಪ್ರಶ್ನೆಗೆ 9 ರಸ್ತೆಗಳಿಗೆ ಬೇಡಿಕೆ ಬಂದಿದೆ, ಅದರಲ್ಲಿ ಒಂಬತ್ತು ರಸ್ತೆಗಳನ್ನು ಸ್ವಲ್ಪ ಸ್ವಲ್ಪ ಅಭಿವೃದ್ಧಿ ಮಾಡಿರುವುದಾಗಿ ಮಾನ್ಯ ಸಚಿವರು ತಿಳಿಸಿದ್ದಾರೆ. ಇದರಲ್ಲಿಯೂ ಕೂಡ ಅಧಿಕಾರಿಗಳ ದರ್ಬಾರು ನಡೆದಿದೆ. ನಾನು ಈ ಕುರಿತು ಅರ್ಜಿಗಳನ್ನು ಕೊಟ್ಟಿದ್ದೇನೆ. ಅದು ಜೀವಂತ ಇದೆಯೋ ಇಲ್ಲವೋ ಎಂದು ನನಗೆ ತಿಳಿಯ ಬೇಡವೇ? ಈ ರೀತಿಯಲ್ಲಿ ಶಾಸಕರನ್ನು ಅವಗಣನೆ ಮಾಡುವುದು ಏತಕ್ಕಾಗಿ? ಜನ ಪ್ರತಿನಿಧಿಗಳು ಎಂದು ನಗರಸಭೆ, ಜಿಲ್ಲಾಪಂಚಾಯತ್, ತಾಲ್ಲೂಕು ಪಂಚಾಯತ್, ಮಂಡಲಪಂಚಾಯತ್, ಮುಂತಾಗಿ ಇರಬಹುದು. ಅವರುಗಳನ್ನು ಕೂಡ ಇಂಥ ವಿಚಾರದಲ್ಲಿ ವಿಶ್ವಾಸಕ್ಕೆ ತೆಗೆದುಕೊಳ್ಳಬೇಕು. ಹೀಗೆ ನೀವು ನಮ್ಮನ್ನು ವಿಶ್ವಾಸಕ್ಕೆ ತೆಗೆದುಕೊಳ್ಳದಿದ್ದರೆ ನೀವು ಮಾಡಿದ್ದೇ ಸರಿ ಎಂದು ಹೇಳುವ ಸ್ಥಿತಿ ಬರುತ್ತದೆ. ಯಾವ ಯಾವ ಯೋಜನೆಗಳು ಇವೆ ಎಂದು ನಮಗೆ ತಿಳಿದಾಗ ಅದನ್ನು ನಾವು ನಮ್ಮ ಜನರಿಗೆ ತಲುಪಿಸುವ ಬಗ್ಗೆ ಕೆಲಸ ಮಾಡಲು ಸಾಧ್ಯವಾಗುತ್ತದೆ. ಹಾಗೆ ತಾವು ಏಕೆ ಮಾಡಿಲ್ಲ?

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ :— ನಾನು ಮತ್ತು ಮಾನ್ಯ ಸದಸ್ಯರು ಕುಳಿತು ಚರ್ಚೆ ಮಾಡಿ, ಕ್ಷೇತ್ರದ ಮೀನುಗಾರರ ಅರ್ಜಿಯನ್ನು ಕೊಡಿ ಎಂದು ಹೇಳಿದ್ದೇನೆ.

ಶ್ರೀ ಕುಂಭೆ ಸುಂದರರಾವ್ :— ನಾವು ನೀವು ಚರ್ಚೆ ಮಾಡಬಹುದು. ಆದರೆ ನಿಮ್ಮ ಅಧಿಕಾರಿಗಳು ಯಾರೂ ಕೈಗೆ ಸಿಕ್ಕುತ್ತಿಲ್ಲ, ಅದರ ಬಗ್ಗೆ ಹೇಳಿ... ತಾವುಗಳು ಇಲ್ಲಿ ಹಾಗೂ ನಮ್ಮ ಊರಿನಲ್ಲಿಯೂ ಸಿಗುತ್ತೀರಿ. ತಾವುಗಳು ಅಧಿಕಾರಿಗಳಿಗೆ ಕಿವಿ ಮಾತು ಹೇಳಬೇಕು. ಜೊತೆಗೆ ಜನಪ್ರತಿನಿಧಿಗಳನ್ನು ವಿಶ್ವಾಸಕ್ಕೆ ತೆಗೆದುಕೊಂಡು ಯೋಜನೆಗಳನ್ನು ಕಾರ್ಯಗತಗೊಳಿಸಬೇಕು.

ಅಧ್ಯಕ್ಷರು :— ತಮ್ಮ ಸಲಹೆ ತುಂಬಾ ಒಳ್ಳೆಯದು.

(ಶ್ರೀ ಕೆ.ಜಯರಾಮ ಶೆಟ್ಟಿಯವರ ಪರವಾಗಿ ಶ್ರೀ ಕುಂಭೆಸುಂದರರಾವ್)

ಮೀನುಗಾರಿಕಾ ಅಭಿವೃದ್ಧಿ ನಿಗಮ.

349(2266) ಶ್ರೀ ಕೆ. ಜಯರಾಮಶೆಟ್ಟಿ (ಉಳ್ಳಾಲ) :— ಮಾನ್ಯ ಬಂದರು ಮತ್ತು ಮೀನುಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೀನುಗಾರಿಕಾ ಅಭಿವೃದ್ಧಿ ನಿಗಮವು ಕಳೆದ ಎರಡು ವರ್ಷಗಳಲ್ಲಿ ಸಾಧಿಸಲಾದ ಪ್ರಗತಿ ಎಷ್ಟು ಹಾಗೂ ಇದರ ಕಾರ್ಯಕ್ರಮಗಳೇನು?

ಆ) ಮೀನುಗಾರಿಕೆ ಅಭಿವೃದ್ಧಿ ನಿಗಮವು ನಷ್ಟವನ್ನು ಅನುಭವಿಸುತ್ತಿದೆಯೇ ಹಾಗಿದ್ದಲ್ಲಿ ಇದಕ್ಕೆ ಕಾರಣಗಳೇನು ಈ ಬಗ್ಗೆ ಸಮೀಕ್ಷೆಯನ್ನೇನಾದರೂ ನಡೆಸಲಾಗಿದೆಯೇ

ಇ) ಈ ನಿಗಮವನ್ನು ಲಾಭದಲ್ಲಿ ನಡೆಸಲು ಯಾವುದಾದರೂ ಮಾರ್ಗಸೂಚಿಯನ್ನು ಅನುಸರಿಸಲಾಗುತ್ತದೆಯೇ ಹಾಗಿದ್ದಲ್ಲಿ ಅದು ಯಾವುವು?